ಸರ್ಕಾರಿ ಜಮೀನುಗಳು

3175 (3056); ಶ್ರೀ ನಾಗರಾಜ್ ಬಿ.ಎಂ. (ಸಿರಗುಪ್ಪ)

ಅ) ಸಿರಗುಪ್ಪ ತಾಲ್ಲೂಕಿನಲ್ಲಿ ವಿವಿಧ ರೀತಿಯ ಒಟ್ಟು ಎಷ್ಟು ಸರ್ಕಾರಿ ಜಮೀನು ಲಭ್ಯವಿದೆ(ಗ್ರಾಮ ಮತ್ತು ಸರ್ವೆ ನಂಬರ್‌ವಾರು ವಿವರ ನೀಡುವುದು)

ಆ) ಸದರಿ ಸರ್ಕಾರಿ ಜಮೀನುಗಳಲ್ಲಿ ಎಷ್ಟು ಎಕರೆ ಒತ್ತುವರಿಯಾಗಿರುತ್ತದೆ(ಗ್ರಾಮ ಮತ್ತು ಸರ್ವೆ ನಂಬರ್‌ವಾರು ವಿವರ ನೀಡುವುದು)

ಇ) ಪಟ್ಟಣದಲ್ಲಿ ಮತ್ತು ಗ್ರಾಮಗಳಲ್ಲಿ ವಿವಿಧ ಯೋಜನೆಗಳಿಗೆ ಸರ್ಕಾರಿ ಜಮೀನು ಮಂಜೂರು ಮಾಡಲು ಲಭ್ಯವಿದೆಯೇ(ಗ್ರಾಮ ಮತ್ತು ಸರ್ವೆ ನಂಬರ್‌ವಾರು ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಸಿರಗುಪ್ಪ ತಾಲ್ಲೂಕಿನಲ್ಲಿ ಒಟ್ಟು 33081.76 ಎಕರೆ ಸರ್ಕಾರಿ ಜಮೀನಿರುತ್ತದೆ. ವಿವರವನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಆ) ಸಿರಗುಪ್ಪ ತಾಲ್ಲೂಕಿನಲ್ಲಿ ಕ್ರಿಯಾಯೋಜನೆ ಪ್ರಕಾರ ಒಟ್ಟು 723.61 ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿರುತ್ತದೆ. ವಿವರವನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

ಇ) ಪಟ್ಟಣದಲ್ಲಿ ಮತ್ತು ಗ್ರಾಮಗಳಲ್ಲಿ ಅರ್ಹ ಯೋಜನೆಗಳಿಗೆ ಲಭ್ಯವಿರುವ ಸರ್ಕಾರಿ ಜಮೀನುಗಳನ್ನು ನಿಯಮಾನುಸಾರ ಪರಿಶೀಲಿಸಿ ಮಂಜೂರು ಮಾಡಲಾಗುವುದು.